

# ನಾನು 'ಡೈರೆಕ್ಟರ್ಸ್ ಆ್ಯಕ್ಟರ್': ಧನಂಜಯ್

■ ಸುಮಲತಾ ಎನ್.

◆ **ಅಭಿನಯದ ನಂಟು ನಿಮ್ಮನ್ನು ಬೆಸೆದುಕೊಂಡದ್ದು ಹೇಗೆ?**

ನಾನು ಹುಟ್ಟಿ ಬೆಳೆದದ್ದು ಚಿಕ್ಕಬಳ್ಳಾಪುರದಲ್ಲಿ. ತಾಯಿಯ ಕೆಲಸದ ಕಾರಣ ಬೆಂಗಳೂರಿಗೆ ಶಿಫ್ಟ್ ಆದೆವು. ಆ ಸಮಯದಲ್ಲಿ ನನ್ನ ತಂಗಿಯನ್ನು ನೃತ್ಯಕ್ಕೆ 'ನಾಟ್ಯ ಸರಸ್ವತಿ ಶಾಂತಲ ಕಲಾಸಂಘ'ಕ್ಕೆ ಸೇರಿಸಲು ಹೋದಾಗ ನನ್ನನ್ನೂ ನಾಟಕದಲ್ಲಿ ಅಭಿನಯಿಸುವಂತೆ ಹೇಳಿ ಪಾತ್ರ ಕೊಟ್ಟರು. 'ಗಂಟೆ ಗೋವಿಂದರಾಜ' ನಾಟಕದಲ್ಲಿ ಮೊದಲು ನಟಿಸಿದೆ. ಅಲ್ಲಿಂದ ನಾಟಕದ ರುಚಿ ಹತ್ತಿತು. 80ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದೆ. ನನ್ನ ಅಮ್ಮ ಹಾಗೂ ತಂಗಿ ಕೂಡ ಕಲಾವಿದರು.

ಧಾರಾವಾಹಿಗಳಲ್ಲಿ ನಟಿಸಬೇಕೆಂಬ ಆಸೆಯಿಂದ ಎಲ್ಲಿ ಆಡಿಷನ್ ನಡೆದರೂ ಹೋಗುತ್ತಿದ್ದೆ. ಅವಕಾಶಗಳು ಅಷ್ಟು ಸುಲಭವಾಗಿ ಸಿಗುತ್ತಿರಲಿಲ್ಲ. ಕೆಲವು ಸಿನಿಮಾಗಳಲ್ಲಿ ಸಣ್ಣ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದೆ. 'ಜಿಲ್ ಜಿಲ್', 'ವಾಸಂತಿ ನಲಿದಾಗ' ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತು. ನಂತರ 'ಲಕ್ಷ್ಮೀ ನಿವಾಸ' ಧಾರಾವಾಹಿಯಲ್ಲಿನ 'ಸಿದ್ದೇಗೌಡ್ರು' ಪಾತ್ರಕ್ಕೆ ಆಡಿಷನ್ ಕೊಟ್ಟೆ. ಅಲ್ಲಿಂದ ಕಿರುತೆರೆಯಲ್ಲಿ ನನ್ನ ಪಯಣ ಶುರುವಾಯಿತು. ಸಿದ್ದೇಗೌಡ ಪಾತ್ರ ಸಿಕ್ಕಿದ ನಂತರ ಜನ ಗುರುತು ಹಿಡಿಯಲು ಆರಂಭಿಸಿದರು. ಒಳ್ಳೆಯ ಕಲಾವಿದ ಅನ್ನಿಸಿಕೊಂಡೆ. ಆಮೇಲೆ ಹಲವು ಕಥೆಗಳು ಬಂದವು. ಎಸ್.ಎಸ್. ಸಜ್ಜನ್ ಅವರ 'ಶುಭಕೃತ್ ನಾಮ ಸಂವತ್ಸರ' ಸಿನಿಮಾದಲ್ಲಿ ಮೊದಲ ಬಾರಿಗೆ ಹೀರೊ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ.

◆ **ನೃತ್ಯ, ಡಬ್ಬಿಂಗ್ ಕಲಾವಿದನಾಗಿ ನಿಮ್ಮ ಅನುಭವಗಳು?**

'ವಾಸಂತಿ ನಲಿದಾಗ' ಸಿನಿಮಾ ನಂತರ ಅವಕಾಶಗಳು ಸಿಗಲಿಲ್ಲ. ಆ ನಡುವಲ್ಲೇ ಎರಡು ಮೂರು ಸಿನಿಮಾಗಳಲ್ಲಿ ಬ್ಯಾಕ್‌ಗ್ರೌಂಡ್ ಡಾನ್ಸರ್ ಆಗಿ ಕಾಣಿಸಿಕೊಂಡೆ. ಡಬ್ಬಿಂಗ್ ಆರ್ಟಿಸ್ಟ್ ಆಗಿಯೂ ದುಡಿದೆ. ಸುಮಾರು ಮುನ್ನೂರು ಸಿನಿಮಾಗಳಿಗೆ ಡಬ್

# ಚೈತ್ರಾ ವಿಮರ್ಶೆ



'ನಾನು ಬೆಳೆಯಲು, ಅರಳಲು ಅನುವು ಮಾಡಿಕೊಡುವಂಥ ವಿಭಿನ್ನ ಆಯಾಮಗಳ ಮಹಿಳಾ ಪಾತ್ರಗಳಲ್ಲಿ ಕಾಣಿಸಿಕೊಳ್ಳುವಂಥ ದೀರ್ಘ ಪಯಣ ನನ್ನ ನಟನಾ ಬದುಕಿನದಾಗಿರಬೇಕು' ಎಂದಿದ್ದಾರೆ ನಟಿ ಚೈತ್ರಾ ಜೆ. ಆಚಾರ್.

'ಸಪ್ತಸಾಗರದಾಚೆ ಎಲ್ಲೊ' ನಂತರ ಈಚೆಗೆ ತಮಿಳಿನ '3BHK' ಸಿನಿಮಾದಲ್ಲಿ ನಟಿಸಿದ್ದ ಚೈತ್ರಾ, ಎರಡೂ ಸಿನಿಮಾದಲ್ಲಿನ ತಮ್ಮ ನಟನೆಗೆ ಬೆನ್ನು ತಟ್ಟಿಸಿಕೊಂಡರು. ಅವರ ನಟನೆಯ 'ಮಾರ್ನಮಿ' ಕನ್ನಡ ಸಿನಿಮಾ ಕೂಡ ಬಿಡುಗಡೆಯಾಗುತ್ತಿದ್ದು, ಮತ್ತೊಂದು ಪ್ರಾಜೆಕ್ಟ್‌ನಲ್ಲಿ ಬಿಝಿಯಾಗಿದ್ದಾರೆ. ಈ ಬಾರಿ ಹೊಸ ನಿರ್ದೇಶಕರೊಂದಿಗೆ ಸಿನಿಮಾ ಮಾಡುತ್ತಿದ್ದಾರೆ.

'ಹೊಸಬರೊಂದಿಗೆ ಕೆಲಸ ಮಾಡುವುದು ಹೊಸ ಚೈತನ್ಯ ತುಂಬುತ್ತದೆ. ಈ ಸಿನಿಮಾವನ್ನು 23 ವರ್ಷದ ಯುವಕ ನಿರ್ದೇಶಿಸುತ್ತಿದ್ದಾರೆ. ಈ ಮುನ್ನ ನಾನು ಮಾಡಿರದಂಥ ಸಿನಿಮಾ ಕಥೆ. ಸಿನಿಮಾದಲ್ಲಿರುವ ಗಟ್ಟಿಯಾದ ಭಾವ ನನ್ನಲ್ಲಿ ಸಿನಿಮಾ ಮಾಡಲು ಉತ್ಸಾಹ ತುಂಬಿದೆ' ಎಂದು ಹೇಳಿದ್ದಾರೆ. 'ಈ ಪೀಳಿಗೆ ಜಾಗತಿಕ ಸಿನಿಮಾ ನೋಡಿಕೊಂಡು ಬೆಳೆಯುತ್ತಿದೆ. ಅವರ ಈ ಎಕ್ಸ್‌ಪೋಷರ್ ಭಯವಿಲ್ಲದೇ ಪ್ರಯೋಗ ಮಾಡಲು ಪ್ರೇರೇಪಿಸುತ್ತಿದೆ. ಕಥೆ ಚೆನ್ನಾಗಿದ್ದರೆ ಹೊಸ ತಂಡವಾದರೂ ಮಾಡಲು ಸಿದ್ಧ' ಎಂದೂ ಮಾತು ಸೇರಿಸಿದ್ದಾರೆ. ತಮ್ಮ ನಟನೆಯ ಕುರಿತು ಸ್ವ ವಿಮರ್ಶೆ ಮಾಡಿಕೊಂಡಿರುವ ಅವರು, ''ಸಿನಿಮಾದ ಪ್ರತಿ ಫ್ರೇಮ್‌ನಲ್ಲಿಯೂ ಒಂದೇ ರೀತಿ ಕಂಡರೆ ಕಲಾವಿದೆಯಾಗಿ ನಾನು ಸೋತಂತೆ. ನಿರ್ದೇಶಕರು 'ಚೈತ್ರಾ ಮಾತ್ರ ಈ ಪಾತ್ರ ಮಾಡಲು ಸಾಧ್ಯ' ಎಂದು ಅನ್ನಿಸುವಂಥ ನಟನೆ ನನ್ನ ಗುರಿ'' ಎಂದಿದ್ದಾರೆ. ■